# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 563 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.08.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಅಭಿವೃದ್ಧಿ ಪಡಿಸಲು ಇಲಾಖೆ ಕೈಗೊಂಡ ಸುಧಾರಣಾ ಕ್ರಮಗಳೇನು: ಪಿಲಿಕುಳ ಪ್ರಾಧಿಕಾರದ ಸಭೆಗಳಲ್ಲಿ ಚರ್ಚಿಸಿದ ಯಾವೆಲ್ಲ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ: | ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಅಭಿವೃದ್ಧಿ ಪಡಿಸಲು ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಪಶ್ಚಿಮ ಘಟ್ಟ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಅದರಂತೆ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ.<br>• ಪ್ರಾದೇಶಿಕ ವಿಜ್ಞಾನ ಕೇಂದ್ರ ಉನ್ನತೀಕರಣಗೊಳಿಸುವ ನಿಟ್ಟಿನಲ್ಲಿ ಪ್ರೊ.ಯು.ಆರ್.ರಾವ್ ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶ ಗ್ಯಾಲರಿಯ ನಿರ್ಮಾಣ ಮಾಡಲು Mangalore Refinery and Petrochemicals Limited (MRPL) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಸಂಸ್ಥೆಯ Corporate Social Responsibility (CSR) ನಿಧಿಯಿಂದ Visvesvaraya Industrial and Technological Museum (VITM) ಮುಖಾಂತರ ಅನುಷ್ಠಾನ ಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | • ತಾರಾಲಯಕ್ಕೆ ಲೇಸರ್ ಪ್ರೊಜೆಕ್ಟರ್ ಅಳವಡಿಕೆಯನ್ನು ಕಾರ್ಪೋರೇಟ್ ಸಂಸ್ಥೆಗಳ Corporate Social Responsibility (CSR) ನಿಧಿಯಿಂದ ಅನುಷ್ಠಾನಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| ಆ) | ಸದರಿ ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿ ಮಾಡುವ ಬಗ್ಗೆ ಮತ್ತು ಮೃಗಾಲಯವನ್ನು ಮೃಗಾಲಯ ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ ಯಾವ ರೀತಿಯ ಕ್ರಮಗಳನ್ನು ವಹಿಸಲಾಗಿದೆ: ಯಾವಾಗ ಈ ಪ್ರಕ್ರಿಯೆಗಳು ಪೂರ್ಣಗೊಳಿಸಲಾಗುವುದು: | ಪ್ರಾಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಮಂಡಳಿ ಮಾಡುವ ಪ್ರಸ್ತಾವನೆ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಇವರನ್ನು ಕೋರಲಾಗಿದ್ದು, ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮವಹಿಸಲಾಗುವುದು.<br><br>ಪಿಲಿಕುಳ ಜೈವಿಕ ಉದ್ಯಾನವನವನ್ನು ಮೃಗಾಲಯ ಪ್ರಾಧಿಕಾರಕ್ಕೆ ವಹಿಸುವ ಬಗ್ಗೆ ದಿನಾಂಕ:18.06.2025 ರಂದು ನಡೆದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ ಜೈವಿಕ ಉದ್ಯಾನವನವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅವಿಭಾಜ್ಯ ಅಂಗವಾಗಿದ್ದು ಇದರ ಅಸ್ತಿತ್ವವನ್ನು ಪ್ರಾಧಿಕಾರದಲ್ಲೇ ಉಳಿಸಿಕೊಂಡು, ನಿರ್ವಹಣೆಯನ್ನು ಮೃಗಾಲಯ ಪ್ರಾಧಿಕಾರಕ್ಕೆ ನೀಡುವ ಬಗ್ಗೆ ತೀರ್ಮಾನಿಸಲಾಗಿದೆ. ಅದರಂತೆ ಮುಂದಿನ ಕ್ರಮವಹಿಸಲಾಗುತ್ತಿದೆ. |
| ಇ) | ಪಿಲಿಕುಳದ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ ಕುರಿತಂತೆ ಸರಕಾರದ ನಿರ್ದೇಶನಗಳೇನು: ಅವುಗಳನ್ನು ಪಾಲಿಸಲಾಗಿದೆಯೇ: ಪಾಲಿಸದಿದ್ದರೆ ಕಾರಣವೇನು: ಅನುಸರಣ ಕ್ರಮಗಳನ್ನು ಕ್ಲಪ್ತ ಸಮಯದಲ್ಲಿ ಅನುಷ್ಠಾನ ಮಾಡಲು ಇರುವ ಸಮಸ್ಯೆಗಳೇನು: | ಪಿಲಿಕುಳದ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಮಾನುಸಾರ ರಚಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |
| ಈ) | ಪಿಲಿಕುಳ ನಿಸರ್ಗಧಾಮದ ವಿವಿಧ | ಪಿಲಿಕುಳ ನಿಸರ್ಗಧಾಮದ ವಿವಿಧ ಕಟ್ಟಡಗಳು, |

| | | |
|---|---|---|
| | ಕಟ್ಟಡಗಳು, ನಾಗರೀಕ ಸೌಲಭ್ಯಗಳು, ವಿದ್ಯುತ್ ಚಾಲಿತ ವಾಹನಗಳು, ವ್ಯವಹಾರ ಮಳಿಗೆಗಳ ಸುಧಾರಣೆಗೆ ಯಾವ ಕ್ರಮ ವಹಿಸಲಾಗಿದೆ ಈಗಾಗಲೇ ಇರುವ ಸೌಕರ್ಯಗಳನ್ನು ನಿಲ್ಲಿಸಲಾಗಿದೆಯೇ ಅಥವಾ ಉನ್ನತೀಕರಿಸಲಾಗಿದೆಯೇ: | ನಾಗರೀಕ ಸೌಲಭ್ಯಗಳು, ವಿದ್ಯುತ್ ಚಾಲಿತ ವಾಹನಗಳು, ವ್ಯವಹಾರ ಮಳಿಗೆಗಳ ನಿರ್ವಹಣೆಗೆ ಕ್ರಮವಹಿಸಿದ್ದು, ಪ್ರಸ್ತುತ ಯಾವುದೇ ಸೌಲಭ್ಯಗಳನ್ನು ನಿಲ್ಲಿಸಿರುವುದಿಲ್ಲ. |
| ಉ) | ಪಿಲಿಕುಳದ ಯಾವ ವಿಭಾಗಗಳನ್ನು, ಮಾರುಕಟ್ಟೆ ಮಳಿಗೆಗೆಳನ್ನು ಸ್ಥಗಿತಗೊಳಿಸಲಾಗಿದೆ: ಕಾರಣವೇನು: ಪ್ರಾಧಿಕಾರದ ಅಧೀನದ ಮಾರುಕಟ್ಟೆ/ಅಂಗಡಿಗಳಲ್ಲಿ ಮಾರಲ್ಪಡುವ ಕರಕುಶಲ ಹಾಗೂ ಇತರ ಸಾಮಾಗ್ರಿಗಳ ಪೂರೈಕೆದಾರರಿಗೆ ಎಷ್ಟು ಅವಧಿಯೊಳಗೆ ಹಣ ಪಾವತಿ ಮಾಡಲಾಗುತ್ತಿದೆ? | ಪಿಲಿಕುಳ ನಿಸರ್ಗಧಾಮದ ಯಾವುದೇ ವಿಭಾಗಗಳನ್ನು ಮತ್ತು ಮಾರುಕಟ್ಟೆ ಮಳಿಗೆಗಳನ್ನು ಸ್ಥಗಿತಗೊಳಿಸಿರುವುದಿಲ್ಲ. ಕರಕುಶಲ ಹಾಗೂ ಇತರ ಸಾಮಾಗ್ರಿಗಳ ಪೂರೈಕೆದಾರರಿಗೆ ಹಣ ಪಾವತಿಗೆ ಯಾವುದೇ ಬಾಕಿ ಇರುವುದಿಲ್ಲ. |

ಸಂಖ್ಯೆ: ಐಟಿಬಿಟಿ 282 ಎಸ್‌ಟಿಎಸ್ 2025

(ಎನ್.ಎಸ್. ಭೋಸರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು